ಓ ಎಸ್ ನಂ. **19/2018**
ಪಿ ಡಬ್ಲ್ಯೂ : **1**

ದಿಃ **10.11.2023** **ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲು : ಪ್ರತಿವಾದಿ ಪರ ಶ್ರೀ ಸಿ ಎನ್ ವಕೀಲರಿಂದ :**

ನಾನು ಬಿ.ಎ., ಓದಿದ್ದೇನೆ. ನನಗೆ ಕನ್ನಡ ಇಂಗ್ಲೀಷ್ ಓದಲು ಬರೆಯಲು ಬರುತ್ತದೆ. ನಮ್ಮ ತಂದೆಯ ಆಸ್ತಿಯನ್ನು ನಮ್ಮ ಚಿಕ್ಕಪ್ಪಂದಿರು ಭಾಗ ತೆಗೆದುಕೂಂಡಿದ್ದಕ್ಕಾಗಿ ದಾವೆ ಮಾಡಿದ್ದೇನೆ. ಸ.ನಂ. 1/2 ಕ್ಕಾಗಿ ನಾನು ದಾವೆ ಮಾಡಿದ್ದೇನೆ. ಅದು ಒಟ್ಟು 3 ಎಕರೆ 19 ಗುಂಟೆ ಇದ್ದು, ಅರಶಿನಕುಂಟೆ ಗ್ರಾಮದಲ್ಲಿರುತ್ತದೆ. ಸ.ನಂ. 1/2 ರ ಒಟ್ಟು ವಿಸ್ತೀರ್ಣ 5 ಎಕರೆ 11 ಗುಂಟೆ ಎಂದರೆ ಸರಿ. ಪೂರ್ವಕ್ಕೆ ವೆಂಕಟಾಚಲಯ್ಯ ಇವರ ಜಮೀನು, ಪಶ್ಚಿಮಕ್ಕೆ ಅರಿಶಿನಕುಂಟೆ ಗ್ರಾಮ , ಉತ್ತರಕ್ಕೆ ಸರ್ಕಾರಿ ರಸ್ತೆ ಮತ್ತು ದಕ್ಷಿಣಕ್ಕೆ ಶಿವಾನಂದಯ್ಯ ಇವರ ಜಮೀನು ಮತ್ತು ಬಸವಣ್ಣ ನವರ ಮಾನ್ಯ ಇರುತ್ತದೆ. ನಮ್ಮ ತಾತನ ಹೆಸರು ಹನುಮಂತಯ್ಯ ಎಂದರೆ ಸರಿ. ಅವರಿಗೆ ಸಂಜೀವಯ್ಯ, ಬೈಲಪ್ಪ , ವೆಂಕಟರಮಣಯ್ಯ ಮತ್ತು ಕಾಮಯ್ಯ ಇರುತ್ತಾರೆ ದಿನಾಂಕಃ 24.04.2016 ರಂದು ನಮ್ಮ ತಂದೆ ತೀರಿಕೊಂಡಿದ್ದಾರೆ. ನಮ್ಮ ತಂದೆ ಸಂಜೀವಯ್ಯ ನಿಗೆ ವಾದಿಗಳು ಮಕ್ಕಳಾಗಬೇಕೆಂದರೆ ಸರಿ. ಬೈಲಪ್ಪ ಬದುಕಿದ್ದಾರೆ. ಅವರಿಗೆ 6 ಜನ ಮಕ್ಕಳು ಇರುತ್ತಾರೆ. ಅವರುಗಳೆಂದರೆ ಭಾಗ್ಯಮ್ಮ, ಸುಜಾತ, ಪಂಕಜ, ನಾಗರತ್ನ, ಸವಿತಾ ಮತ್ತು ಗಿರೀಶ ಇರುತ್ತಾರೆ. ಕಾಮಯ್ಯ ಇವರಿಗೆ ಬದುಕಿದ್ದಾರೆ. ಅವರಿಗೆ 3 ಜನ ಮಕ್ಕಳಿರುತ್ತಾರೆ. ಭಾರತಿ , ನಿರ್ಮಲ ಮತ್ತು ಲೋಕೇಶ್ ಅವರ ಮಕ್ಕಳೆಂದರೆ ಸರಿ.

ನನ್ನ ಚಿಕ್ಕಪ್ಪ ವೆಂಕಟರಮಣಯ್ಯ ಓ ಎಸ್ 275/2015 ಎನ್ನುವ ದಾವೆಯನ್ನು 2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಲಯದಲ್ಲಿ ದಾವೆ ಮಾಡಿದ್ದರು ಎಂದರೆ ಸರಿ. ಇದೇ ಜಮೀನಿನಲ್ಲಿ ಭಾಗ ಬೇಕೆಂದು ಅವರು ಆ ಕೇಸ್ ನಲ್ಲಿ ಕೇಳಿದ್ದರು. ಆ ಕೇಸ್ ನಲ್ಲಿ ನಾನು 1 ನೆ ಪ್ರತಿವಾದಿ ಇದ್ದೆನು ಎಂದರೆ ಸರಿ. ವಾದಿ 2 ರಿಂದ 4 ರವರು ಅದರಲ್ಲಿ ಪ್ರತಿವಾದಿ 2 ರಿಂದ 4 ರವರಾಗಿದ್ದರು ಎಂದರೆ ಸರಿ. ಬೈಲಪ್ಪ ಇವರು ಆ ದಾವೆಯಲ್ಲಿ 5 ನೆ ಪ್ರತಿವಾದಿ ಎಂದರೆ ಸರಿ. ಅದರಲ್ಲಿ ಅವರ ಹೆಣ್ಣು ಮಕ್ಕಳನ್ನು ಪ್ರತಿವಾದಿ 7 ರಿಂದ 11 ಎಂದು ಪಾರ್ಟಿ ಮಾಡಿದ್ದರು ಎಂದರೆ ಸರಿ. ಅದರಲ್ಲಿ ಕಾಮಯ್ಯ ಇವರು ಸಹ 12 ನೆ ಪ್ರತಿವಾದಿಯಾಗಿದ್ದರು ಎಂದರೆ ಸರಿ. ಆ ಕೇಸ್ ನಲ್ಲಿ ವಾದಿಗಳು ದಿನಾಂಕ : 2.12.2012 ರಂದು ವಿಭಾಗವಾಗಿದೆ ಆ ಪ್ರಕಾರ ಡಿಕ್ರಿ ಮಾಡಬೇಕೆಂದು ಕೇಳಿಕೂಂಡಿದ್ದರು ಎಂದರೆ ಸರಿಯಲ್ಲ. ಆ ಕೇಸ್ ನ ವಾದಿಗಳು ದಾವಾ ಸ್ವತ್ತು ಅಲ್ಲದೆ ಇತರೇ ಸ್ವತ್ತುಗಳ ಮೇಲೆಯೂ ದಾವೆ ಮಾಡಿದ್ದರು ಎಂದರೆ ಸರಿ. ಅದರಲ್ಲಿ ಅವರು ಸ.ನಂ. 1/2 ರಲ್ಲಿ ಒಟ್ಟು 5 ಎಕರೆ 11 ಗುಂಟೆಗಾಗಿ ದಾವೆ ಮಾಡಿದ್ದರು ಎಂದರೆ ಸರಿ. ಅದರಲ್ಲಿ ಅವರು 1 ಎಕರೆ 11 ವರೆ ಗುಂಟೆ ನಮಗೆ ಬರಬೇಕೆಂದು ಹಾಕಿದ್ದರು ಎಂದರೆ ಸರಿ. ಆದರೆ ಅವರು ಕೇಳಿದ್ದು ತಪ್ಪು ಇರುತ್ತದೆ ಎಂದು ಸಾಕ್ಷಿ ಹೇಳುತ್ತಾರೆ.

ದಾವಾ ಸ್ವತ್ತು ಪಿತ್ರಾರ್ಜಿತ ಸ್ವತ್ತು ಎಂದರೆ ಸರಿಯಲ್ಲ. ದಿನಾಂಕ : 15.01.1949 ರಲ್ಲಿ ನಮ್ಮ ತಾತ ಹನುಮಂತಯ್ಯ ಇವರು ದಾವಾ ಸ್ವತ್ತನ್ನು ಖರೀದಿಸಿದ್ದರು ಎಂದರೆ ಸರಿ. **ಸಾಕ್ಷಿ ಆ ಕ್ರಯಪತ್ರವನ್ನು ಒಪ್ಪಿಕೊಂಡಿದ್ದರಿಂದ ಅದನ್ನು ನಿ ಡಿ 1 ಎಂದು ಗುರುತಿಸಲಾಯಿತು.** ಅದನ್ನು ಚನ್ನವೀರಪ್ಪ ಅಲಿಯಾಸ್ ರಾಜಣ್ಣ ಇವರಿಂದ ಖರೀದಿಸಿದ್ದರು. ಪತ್ರದಲ್ಲಿ ಸ.ನಂ. 1/2 ರ ವಿಸ್ತೀರ್ಣವನ್ನು 4 ಎಕರೆ 36 ಗುಂಟೆ ಎಂದು ಬರೆದಿದೆ ಎಂದರೆ ಸರಿ. ಪಹಣಿಯಲ್ಲಿ ಅದರ ವಿಸ್ತೀರ್ಣ 5 ಎಕರೆ 11 ಗುಂಟೆ ಆಗಿದೆ ಎಂದರೆ ಸರಿ. ದಿನಾಂಕ : 2.12.2002 ರಂದು 6 ಜನ ಅಣ್ಣ ತಮ್ಮಂದಿರು ಸ.ನಂ. 1/2 ನ್ನು ವಿಭಾಗ ಮಾಡಿಕೊಂಡಿದ್ದಾರೆ ಎಂದರೆ ಸರಿಯಲ್ಲ. ಆ ದಾವೆಯಲ್ಲಿ ದಿನಾಂಕ :2.12.2002 ರಂದು ಆದ

ವಿಭಾಗಪತ್ರವನ್ನು ಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ಆ ಪ್ರಕರಣದಲ್ಲಿ ವಿಭಾಗಪತ್ರ ನಿಶಾನೆಯಾಗಿದೆ ಎಂದರೆ ಸರಿಯಲ್ಲ. ಆ ದಾವೆಯನ್ನು ನ್ಯಾಯಾಲಯದ ಅಧಿಕಾರ ವ್ಯಾಪ್ತಿ ಬರುವುದಿಲ್ಲ ಎಂಬ ಕಾರಣಕ್ಕ ವಾಪಸ್ ಪಡೆದಿದ್ದರು ಎಂದರೆ ಸರಿ. ಅದನ್ನು ವಾಪಸ್ ಪಡೆದ ನಂತರ ಹೆಚ್ಚುವರಿ ಸಿವಿಲ್ ಹಿರಿಯ ನ್ಯಾಯಾಲಯದಲ್ಲಿ ಓ ಎಸ್ 500/2023 ಎಂದು ದಾಖಲಾಗಿದೆ ಎಂದರೆ ಸರಿ. ಆ ಪ್ರಕರಣದಲ್ಲಿ ನಮಗೆ ಸಮನ್ಸ ಜಾರಿಯಾಗಿದೆ ಎಂದರೆ ಸರಿ.

ಸ.ನಂ. 1/2 ರಲ್ಲಿ ನಾನು 20 ಗುಂಟೆಯನ್ನು ಮಾರಾಟ ಮಾಡಿದ್ದೇನೆ ಎಂದರೆ ಸರಿ. ಅದನ್ನು ಪುಟ್ಟರಂಗಯ್ಯ ಇವರ ಮಗ ಸಂಪತ್ ಕೃಷ್ಣ ಎಂಬುವವರಿಗೆ ಮಾರಿದ್ದೇನೆಂದರೆ ಸರಿ. ಆ ಪತ್ರದಲ್ಲಿ ಪಿತ್ರಾರ್ಜಿತ ಸ್ವತ್ತು ಎಂದು ಬರೆದಿದೆ ಎಂದರೆ ಸರಿ. ಆದರೆ ಅದು ಪಿತ್ರಾರ್ಜಿತ ಸ್ವತ್ತು ಅಲ್ಲ ಎಂದು ಸಾಕ್ಷಿ ಹೇಳುತ್ತಾರೆ. ದಾವಾ ಸ್ವತ್ತು ಪಿತ್ರಾರ್ಜಿತ ಸ್ವತ್ತು ಎಂದು ಗೊತ್ತಿದ್ದರೂ ಸಹ ಅಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆ ಪತ್ರದಲ್ಲಿ ನಾನು ಮತ್ತು ನನ್ನ ಸಹೋದರ ಸೇರಿಕೊಂಡು ಜುಬಾನಿ ವಿಭಾಗಪತ್ರ ಮಾಡಿಕೊಂಡಿದ್ದೇವೆ ಎಂದು ಬರೆಸಿದೆ ಎಂದರೆ ಸರಿಯಲ್ಲ. ಆ ಪತ್ರಕ್ಕೆ ನಾನು, ಗಿರೀಶ , 1 ನೆ ಪ್ರತಿವಾದಿ ಬೈಲಪ್ಪ ಮತ್ತು ನಮ್ಮ ತಂದೆ ಸಂಜೀವಯ್ಯ ಸಹಿ ಮಾಡಿದ್ದೇವೆ ಎಂದರೆ ಸರಿ. ಆ ಪತ್ರವನ್ನು ನಾನು ಓದಿ ಸಹಿ ಮಾಡಿದ್ದೇನೆಂದರೆ ಸರಿಯಲ್ಲ. ದಿನಾಂಕ : 19.11.2007 ಕ್ಕೆ ನನಗೆ 42 ವರ್ಷ ವಯಸ್ಸಾಗಿತ್ತು. ಆ ಪತ್ರಕ್ಕೆ ನಾನು ಓದಿ ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ. ಆ ಪತ್ರದಲ್ಲಿ ಬರೆದಿರುವುದು ಸರಿ ಇಲ್ಲ ಎಂದು ಅದನ್ನು ಎಲ್ಲಿಯೂ ಪ್ರಶ್ನಿಸಿಲ್ಲ. ಅದನ್ನು ಪ್ರಶ್ನೆ ಮಾಡಲು ನನಗೆ ಯಾವುದೇ ಸಮಸ್ಯೆ ಇರಲಿಲ್ಲ.

**ಮುಂದುವರೆದ ಪಾಟೀ ಸವಾಲಿಗಾಗಿ ಸಿ ಎನ್ ವಕೀಲರು ಕಾಲಾವಕಾಶ ಕೋರಿದ್ದು, ಕೋರಿಕೆಯ ಮೇರೆಗೆ ಮುಂದೂಡಲಾಯಿತು.**

**(ಉಖ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

**ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು,**

**ಮಾಗಡಿ.**